ಪಿಡಬ್ಲ್ಯೂ -1

ಇಂದು ದಿ. 06-07-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿನ ಎಲ್ಲಾ ಅಂಶಗಳನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನನ್ನ ಅರ್ಜಿಯ ಜೊತೆ ನನ್ನ ಜಾಗಕ್ಕೆ ಸಂಬಂಧಿಸಿದ ಸರ್ವೆ ನಂ.26/2, ಸುರಗೊಂಡನಹಳ್ಳಿ ಗ್ರಾಮ, ಜಗಳೂರು ತಾಲ್ಲೂಕಿನ ಪಹಣಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.1 ಎಂದು, ಉಪನೋಂದಣಾಧಿಕಾರಿಗಳು ಜಗಳೂರು ಇವರು ನೀಡಿದ ಮಾರುಕಟ್ಟೆ ಮೌಲ್ಯ ದರ ಪಟ್ಟಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಈ ದಾಖಲೆಗಳ ಆಧಾರದ ಮೇಲಿಂದ ನಾನು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ವಿನಂತಿಯಿರುತ್ತದೆ.

ಪಾಟೀಸವಾಲುಃ - ಎದುರುದಾರರ ಪರ ವಕೀಲರಿಂದ ಃ

ನಮ್ಮ ಜಮೀನಿನಲ್ಲಿ 2014 ರಲ್ಲಿ ಲೈನ್ ಎಳೆಯಲಾಗಿದೆ ಎಂದರೆ ಸರಿ. ಆ ಸಮಯದಲ್ಲಿ ಕಂಪನಿಯವರು ನಮ್ಮ ಮನೆಗೆ ಬಂದು ದುಡ್ಡು ಕೊಟ್ಟು ಸಹಿ ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು, ದುಡ್ಡು ಕೊಟ್ಟಿರುತ್ತಾರೆ, ಆದರೆ ಖಾಲಿ ಪೇಪರಿಗೆ ಸಹಿ ದಾಖಲಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಆ ರೀತಿ ದುಡ್ಡು ಕೊಟ್ಟು ನಾವು ಸಹಿ ಹಾಕಿದ ಬಳಿಕವೇ ಲೈನ್ ಎಳೆಯಲು ನಾವು ಅವಕಾಶ ಕೊಟ್ಟಿರುತ್ತೇವೆ ಎಂದರೆ ಸರಿ. ನಮ್ಮ ಜಮೀನಿನಲ್ಲಿ ಮಳೆ ಬಂದಾಗ ಮಾತ್ರ ಬೆಳೆ ಬೆಳೆಯಲಾಗುತ್ತದೆ ಎಂದರೆ ಸರಿ. ನಮ್ಮ ಜಮೀನಿನಲ್ಲಿ ಲೈನ್ ಎಳೆಯುವ ಸಮಯದಲ್ಲಿ ಯಾವುದೇ ಮರ ಇರಲಿಲ್ಲ ಎಂದರೆ ಸರಿ. ನನ್ನ ಅರ್ಜಿಯಲ್ಲಿ ನನ್ನ ಜಮೀನಿನಲ್ಲಿ ಲೈನ್ ಎಳೆಯುವಾಗ ಮರಗಳು ಇದ್ದವು, ಅವುಗಳನ್ನು ಕಡಿದಿರುತ್ತಾರೆ ಎಂದು ಬರೆದಿರುವುದು ಸುಳ್ಳು ಎಂದರೆ ಸಾಕ್ಷಿಯು ಜಮೀನಿನಲ್ಲಿ ಯಾವುದೇ ಮರ ಇರಲಿಲ್ಲ ಎಂದು ನುಡಿದಿರುತ್ತಾರೆ. ನನ್ನ ಜಮೀನಿನಲ್ಲಿ ಟವರ್ ಹಾಕಲಾಗಿದೆ ಎಂದರೆ ಸರಿ. ಆದರೆ ಅದು ಯಾವ ವರ್ಗಕ್ಕೆ ಅಂದರೆ ಎ, ಬಿ, ಸಿ ಅಥವಾ ಡಿ ವರ್ಗಕ್ಕೆ ಸೇರಿದ ಟವರ್ ಎಂದು ನನಗೆ ತಿಳಿದಿರುವುದಿಲ್ಲ. ನನ್ನ ಜಮೀನಿನಲ್ಲಿ 6 ಮೀಟರ್ ಅಗಲದ ವಿಸ್ತೀರ್ಣದ ಲೈನನ್ನು ಎಳೆಯಲಾಗಿದೆ ಎಂದರೆ ಸಾಕ್ಷಿಯು ಆ ಕುರಿತಾಗಿ ನನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಕಂಪನಿಯವರು ನಮ್ಮ ಜಮೀನಿನಲ್ಲಿ ಲೈನ್ ಎಳೆಯುವ ಸಮಯದಲ್ಲಿ ಆಗಿನ ಮೌಲ್ಯಕ್ಕೆ ಸರಿಯಾಗಿ ಹಣವನ್ನು ನೀಡಿ ನಮ್ಮ

ಒಪ್ಪಿಗೆಯನ್ನು ಪಡೆದುಕೊಂಡು ನಂತರ ಲೈನನ್ನು ಎಳೆದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಜಮೀನಿನಲ್ಲಿ ಬೆಳೆಯಲಾದ ಬೆಳೆಗಳ ನಾಶದ ಕುರಿತಾಗಿ ಮಾತ್ರ ಪರಿಹಾರ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಟವರ್ ಹಾಕಿದ ಕುರಿತಾಗಿಯು ಹಣ ನೀಡಿರುತ್ತಾರೆ ಎಂದರೆ ಸಾಕ್ಷಿಯು ಕೇವಲ ಬೆಳೆ ನಾಶದ ಕುರಿತಾಗಿ ಮಾತ್ರ ಹಣ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ನನ್ನ ಅರ್ಜಿಯಲ್ಲಿ ಈ ಅಂಶಗಳನ್ನು ನುಡಿದಿರುವುದಿಲ್ಲ. ನನ್ನ ಅರ್ಜಿಯಲ್ಲಿ ಬಲತ್ಕಾರದಿಂದ ಕಂಪನಿಯವರು ನನ್ನ ಜಮೀನಿನಲ್ಲಿ ಲೈನ್ ಎಳೆದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2018 ರಲ್ಲಿ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಾಗಿದೆ

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.